04 August 2026

To,

BSE Limited
Phiroze Jeejeebhoy Towers,
Dalal Street,
Mumbai- 400 001
Scrip Code: 543260

National Stock Exchange of India Ltd.
Exchange Plaza, Plot no. C/1, G Block,
Bandra-Kurla Complex
Bandra (E), Mumbai - 400 051
NSE Symbol: STOVEKRAFT

Dear Sir / Madam,

Sub: Newspaper Publication

Please find enclosed herewith copies of newspaper publication of Standalone Unaudited Financial Results for the quarter ended 30 June 2026 published in the following newspapers:

1. Vijay Karnataka (Regional Newspaper) on 04 August 2026.
2. Business Line (National Newspaper) on 04 August 2026.

Kindly take the same on the record.

Thanking you,

Yours faithfully
For Stove Kraft Limited

SHRINIVAS PRANESHACHARYA HARAPANAHALLI

Digitally signed by SHRINIVAS PRANESHACHARYA HARAPANAHALLI
Date: 2026.08.04 11:43:04 +05'30'

Shrinivas P Harapanahalli
Company Secretary & Compliance Officer

ಸಚಿವ ಸ್ಥಾನ ಕೇಳಿದವರಿಗೆ ಕೊಡದೆ ಬೇಡವೆಂದವರಿಗೆ ನೀಡಿದ್ದೇಕೆ? | ಲೋಕಭವನದಿಂದ ದೂರ

ಹೈ ನಿರ್ದೇಶನಕ್ಕೆ ಸಿದ್ದರಾಮಯ್ಯ ಬೇಸರ

■ **ವಿಕ ಸುದ್ದಿಲೋಕ** ಬೆಂಗಳೂರು

ಸಿಎಂ ಡಿ.ಕೆ.ಶಿವಕುಮಾರ್ ನೇತೃತ್ವದ ಸಂಪುಟ ವಿಸ್ತರಣೆ ನಡೆದ ಬೆನ್ನಿಗೇ ಅವಕಾಶ ವಂಚಿತರ ಅತೃಪ್ತಿ ಭುಗಿಲೆದ್ದಿದ್ದು, ಮಾಜಿ ಸಿಎಂ ಸಿದ್ದರಾಮಯ್ಯ ಅಸಮಾಧಾನಗೊಂಡು ನೂತನ ಸಚಿವರ ಪ್ರಮಾಣ ವಚನ ಸ್ವೀಕಾರ ಸಮಾರಂಭದಿಂದ ಹೊರಗುಳಿದರು.

ತಮ್ಮ ಹುಟ್ಟುಹಬ್ಬದ ಅಂಗವಾಗಿ ಅಧಿಕೃತ ನಿವಾಸ ಕಾವೇರಿಯಲ್ಲೇ ಉಳಿದು ಅಭಿಮಾನಿಗಳು, ಬೆಂಬಲಿಗರಿಂದ ಶುಭಾಶಯ ಸ್ವೀಕರಿಸುತ್ತಾ ಖುಷಿಖುಷಿಯಾಗಿದ್ದ ಸಿದ್ದರಾಮಯ್ಯ, ನೂತನ ಸಚಿವರ ಪಟ್ಟಿಯಲ್ಲಿ ತಮ್ಮ ಅಭಿಪ್ರಾಯ ಕಡೆಗಣಿಸಿ ರಾಜಧಾನಿಯ ಪ್ರಭಾವಿ ವ್ಯಕ್ತಿಗೆ ಮತ್ತೆ ಅವಕಾಶ ಕಲ್ಪಿಸಿದ್ದು ಅವರನ್ನು ಸಿಟ್ಟಿಗೇಳುವಂತೆ ಮಾಡಿತು ಎಂದು ತಿಳಿದು ಬಂದಿದೆ.



ತಾವು ಬೇಡ ಎಂದ ವ್ಯಕ್ತಿಗೆ ಮಣೆ ಹಾಕಿದ್ದಲ್ಲದೆ ತಾವು ಸೂಚಿಸಿದ್ದ ಬ್ಯಾಡಗಿ ಕ್ಷೇತ್ರದ ಬಸವರಾಜ್ ನೀಲಪ್ಪ ಶಿವಣ್ಣವರ್ ಹೆಸರು ಪಟ್ಟಿಯಲ್ಲಿ ಇಲ್ಲದಿರುವುದು ಸಿಟ್ಟನ್ನು ಹೆಚ್ಚಿಸಿತು ಎನ್ನಲಾಗಿದೆ. ತಕ್ಷಣವೇ ರಾಜ್ಯ ಉಸ್ತುವಾರಿ ಸುರ್ಜೇವಾಲಾ ಅವರಿಗೆ ಕರೆ ಮಾಡಿ ಮಾತನಾಡಿದ ಸಿದ್ದರಾಮಯ್ಯ, ವರ್ಚಸ್ಸು ಇಲ್ಲದವರಿಗೆ ಮಣೆ ಹಾಕಲಾಗಿದೆ, ಪಟ್ಟಿಯಲ್ಲಿ ಪ್ರಾದೇಶಿಕ ಮತ್ತು ಸಾಮಾಜಿಕ ಸಮತೋಲನ ಇಲ್ಲ ಎಂದು ಅಸಮಾಧಾನ ತೋರ್ಪಡಿಸಿದ್ದಾರೆ.

ಮಹಿಳಾ ತೊಡಕು: ವರಿಷ್ಠರೊಂದಿಗೆ ಮಾತುಕತೆ ಕಾಲಕ್ಕೆ ಸಿದ್ದರಾಮಯ್ಯ ಅವರು ಉಮಾಶ್ರೀ ಹೆಸರನ್ನು, ಸಿಎಂ ಡಿ.ಕೆ. ಶಿವಕುಮಾರ್ ಅವರು ಲಕ್ಷ್ಮೀ ಹೆಬ್ಬಾಳಕರ್ ಹೆಸರನ್ನು ಸೂಚಿಸಿದ್ದರು ಎನ್ನಲಾಗಿದೆ. ಇಬ್ಬರಲ್ಲೂ ಒಮ್ಮತ ಬಾರದ ಕಾರಣ ಹೈಕಮಾಂಡ್ ಗಾಯತ್ರಿ ಶಾಂತೇಗೌಡ ಹೆಸರನ್ನು ಪರಿಗಣಿಸಿತು. ಆದರೆ, ಪರಿಷತ್‌ನಲ್ಲಿ ಡಾ.ಯತೀಂದ್ರ ಪ್ರಾತಿನಿಧ್ಯವಿದ್ದು, ಕುರುಬ ಸಮುದಾಯದ ಮತ್ತೊಬ್ಬರಾದ ಗಾಯತ್ರಿ ಅವರಿಗೆ ಅವಕಾಶ ಕೊಟ್ಟರೆ ತಪ್ಪಾಗುತ್ತದೆ ಎಂಬುದು ತಡವಾಗಿ ಅರಿವಾಯಿತು. ಗಾಯತ್ರಿ ಅವರನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡ ಸಿದ್ದರಾಮಯ್ಯ ಪ್ರಮಾಣ ಸ್ವೀಕಾರ ಮಾಡದಂತೆ ಸೂಚಿಸಿದ್ದಲ್ಲದೆ ಈ ಸ್ಥಾನಕ್ಕೆ ಉತ್ತರ ಕರ್ನಾಟಕದ ಕುರುಬ ಸಮುದಾಯಕ್ಕೆ ಪ್ರಾತಿನಿಧ್ಯ ಸಿಗಲು ನೀಲಪ್ಪ ಶಿವಣ್ಣನವರ್ ಹೆಸರನ್ನು ಪರಿಗಣಿಸುವಂತೆ ವರಿಷ್ಠರಿಗೆ ದೂರವಾಣಿ ಮೂಲಕ ಸಲಹೆ ನೀಡಿದರು. ಆದರೆ, ಸಿದ್ದರಾಮಯ್ಯ ಅವರ ಈ ಸಲಹೆಯನ್ನು ಒಪ್ಪದ ಹೈಕಮಾಂಡ್, ಪರಿಷತ್ ಸದಸ್ಯರಾದ ಬೋಸರಾಜು ಹೆಸರನ್ನು ಪರಿಗಣಿಸಿದೆ. ಆದರೆ, ಇದರಿಂದ ಸಂಪುಟದಲ್ಲಿ ಮಹಿಳಾ ಪ್ರಾತಿನಿಧ್ಯವೇ ಇಲ್ಲವಾಗುತ್ತದೆ ಎಂಬ ಕಾರಣಕ್ಕೆ ಗಾಯತ್ರಿ ಅವರಿಗೆ ಸಿಗದ ಮಂತ್ರಿ ಸ್ಥಾನವನ್ನು ಖಾಲಿ ಉಳಿಸಿಕೊಳ್ಳಲು ತೀರ್ಮಾನಿಸಲಾಯಿತು ಎನ್ನಲಾಗಿದೆ.

ಸುಪ್ರೀಂ ಹೈಕಮಾಂಡ್: ಸಂಪುಟದಲ್ಲಿ ರಾಜ್ಯ ನಾಯಕರ ಅಭಿಪ್ರಾಯ ಪಡೆಯಲಾಯಿತಾದರೂ ಪಟ್ಟಿ ಅಂತಿಮಗೊಳಿಸುವಲ್ಲಿ ಹೈಕಮಾಂಡ್ ತನ್ನದೇ ಮಾನದಂಡವನ್ನು ಅನುಸರಿಸಿತು. ಈ ಮೂಲಕ ತಾನೇ ಸುಪ್ರೀಂ ಎಂಬುದನ್ನು ವರಿಷ್ಠರು ಸಾಬೀತುಪಡಿಸಿದರು. ಮೊದಲಿಗೆ ಮಲ್ಲಿಕಾರ್ಜುನ್ ಹೆಸರನ್ನು ಕೈಬಿಡಲಾಗಿತ್ತು. ಆದರೆ, ಒಕ್ಕಲಿಗ ಸಮುದಾಯಕ್ಕೆ 6 ಸ್ಥಾನ ಕಲ್ಪಿಸಿ, ಲಿಂಗಾಯತರನ್ನು 5 ಸ್ಥಾನಕ್ಕೆ ಉಳಿಸಿದರೆ ತಪ್ಪು ಸಂದೇಶ ಹೋಗಲಿದೆ ಎಂಬ ಕಾರಣಕ್ಕೆ ತೀರ್ಮಾನ ಬದಲಾಯಿತು. ವೈದ್ಯ ಅವರಿಗೆ ಕೊಕ್ ನೀಡಿ ಮಲ್ಲಿಕಾರ್ಜುನ ಅವರಿಗೆ ಮಣೆ ಹಾಕಲಾಯಿತು. ಈ ಮಧ್ಯೆ ನಾಯಕರು ಹಾಗೂ ಶಾಸಕರ ಅಸಮಾಧಾನಕ್ಕೂ ಎಐಸಿಸಿ ವರಿಷ್ಠ ನಾಯಕರು ಡೋಂಟ್ ಕೇರ್ ಎಂದಿದ್ದು, ಅತೃಪ್ತರ ಮನವೊಲಿಸಲು ಕೆಪಿಸಿಸಿ ಅಧ್ಯಕ್ಷರಿಗೆ ಟಾಸ್ಕ್ ನೀಡಿದ್ದಾರೆ. ಮನವೊಲಿಕೆ ಪ್ರಯತ್ನ ಮಾಡಿ. ಒಪ್ಪದೆ ಯಾರಾದರೂ ರಾಜೀನಾಮೆ ಕೊಟ್ಟರೆ ಸ್ವೀಕರಿಸಿ ಎಂದು ಹೈಕಮಾಂಡ್ ಖಡಕ್ ಸಂದೇಶ ನೀಡಿದೆ ಎಂದು ತಿಳಿದು ಬಂದಿದೆ.

ಸಾಮಾಜಿಕ ನ್ಯಾಯ: ಸುರ್ಜೇವಾಲಾ

''ಸಂಪುಟದಲ್ಲಿ ಸಾಮಾಜಿಕ ನ್ಯಾಯಕ್ಕೆ ಪಕ್ಷವು ತನ್ನ ಬದ್ಧತೆಯನ್ನು ದೃಢಪಡಿಸಿದ್ದು, ಯುವಶಕ್ತಿ ಮತ್ತು ಅನುಭವದ ಸಮನ್ವಯ ಸಾಧಿಸಲಾಗಿದೆ. ಪ್ರತಿಯೊಬ್ಬ ಕನ್ನಡಿಗರ ಕಲ್ಯಾಣದಲ್ಲೇ ಕಾಂಗ್ರೆಸ್ ಸರಕಾರದ ಧ್ಯೇಯ ಮತ್ತು ಬದ್ಧತೆ ಅಡಗಿದೆ,'' ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ತಿಳಿಸಿದ್ದಾರೆ.

ನಾಯಕರ ಕೋಟಾ ಸಮತೋಲನ

ಸಂಪುಟ ವಿಸ್ತರಣೆಯಲ್ಲಿ ಮೂರೂ ಕೋಟಾಗಳಲ್ಲೂ ಭರ್ತಿ ಮಾಡಲಾಗಿದೆ. ಮುಖ್ಯಮಂತ್ರಿ ಸಿಎಂ ಡಿ.ಕೆ.ಶಿವಕುಮಾರ್ ಅವರು ಸೂಚಿಸಿದ್ದ ಹೆಸರುಗಳಲ್ಲಿ ಎಚ್.ಸಿ.ಬಾಲಕೃಷ್ಣ ವಿಜಯಾನಂದ ಕಾಶಪ್ಪನವರ್, ನರೇಂದ್ರಸ್ವಾಮಿ ಮತ್ತು ತಂಗಡಗಿ ಅವರಿಗೆ ಅವಕಾಶ ಸಿಕ್ಕಿದೆ.

ಮಾಜಿ ಸಿಎಂ ಸಿದ್ದರಾಮಯ್ಯ ಸೂಚಿಸಿದ್ದ ಹೆಸರುಗಳ ಪೈಕಿ ಸಂತೋಷ್ ಲಾಡ್, ಬಸವರಾಜ ರಾಯರಡ್ಡಿ, ಕೆ.ಎಂ.ಶಿವಲಿಂಗೇಗೌಡ ಮತ್ತು ಪುಟ್ಟರಂಗಶೆಟ್ಟಿ ಅವರಿಗೆ ಪ್ರಾತಿನಿಧ್ಯ ಸಿಕ್ಕಿದೆ.

ಇಬ್ಬರ ಆಯ್ಕೆ: ಮಧು ಬಂಗಾರಪ್ಪ, ಡಾ.ಅಜಯ್ ಸಿಂಗ್, ಚಲುವರಾಯಸ್ವಾಮಿ, ಲಕ್ಷ್ಮಣ ಸವದಿ, ರುದ್ರಪ್ಪ ಲಮಾಣಿ ಮತ್ತು ಬಿ.ನಾಗೇಂದ್ರ ಹೆಸರುಗಳನ್ನು ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಇಬ್ಬರೂ ಸೂಚಿಸಿದ್ದರು. ರಿಜ್ವಾನ್ ಅರ್ಷದ್ ಅವರು ಡಿಕೆಶಿ, ಸಿದ್ದರಾಮಯ್ಯ ಹಾಗೂ ಹೈಕಮಾಂಡ್ ಆಯ್ಕೆಯಾಗಿದೆ.

ಹೈಕಮಾಂಡ್ ತೀರ್ಮಾನ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಆಸಕ್ತಿಯಂತೆ ಎಸ್.ಎಸ್.ಮಲ್ಲಿಕಾರ್ಜುನ್ ಕೊನೇ ಕ್ಷಣದಲ್ಲಿ ಅವಕಾಶ ಪಡೆದರೆ, ಕೆ.ರಘುಮೂರ್ತಿ ಮತ್ತು ಬಸವಂತಪ್ಪ ಆಯ್ಕೆಯೂ ಖರ್ಗೆ ಅವರದ್ದಾಗಿದೆ. ಸಿಎಂ ಮತ್ತು ಕೆ.ಸಿ.ವೇಣುಗೋಪಾಲ್ ಅವರು ಒಟ್ಟಾಗಿ ಜಮೀರ್ ಅಹ್ಮದ್ ಖಾನ್ ಕೈಹಿಡಿದಿದ್ದಾರೆ.

ವಿವರಣಾತ್ಮಕ ಪ್ರಶ್ನೆಗಳಿಗೆ ಕೊಕ್

ಮುಂಬರುವ ಶಿಕ್ಷಕರ ನೇಮಕಾತಿ ಪರೀಕ್ಷೆಗಳಲ್ಲಿ ಜಾರಿ ಸಾಧ್ಯತೆ | ತ್ವರಿತ ಮೌಲ್ಯಮಾಪನಕ್ಕೂ ಅನುಕೂಲ

■ **ಶಾಂತಮೂರ್ತಿ** ಬೆಂಗಳೂರು
shantha.a@timesofindia.com

ಇತ್ತೀಚೆಗಷ್ಟೇ 15,000 ಶಿಕ್ಷಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಿದ್ದ ರಾಜ್ಯ ಸರಕಾರ, ಈಗ ಶಿಕ್ಷಕರ ನೇಮಕಾತಿ ಪರೀಕ್ಷೆಗಳಲ್ಲಿ ವಿವರಣಾತ್ಮಕ ಪ್ರಶ್ನೆಗಳನ್ನು ಕೈಬಿಡಲು ಚಿಂತನೆ ನಡೆಸಿದೆ. ಪರೀಕ್ಷೆಗಳಲ್ಲಿ ಆಗುತ್ತಿರುವ ವಿಳಂಬ ತಪ್ಪಿಸುವ ಜತೆಗೆ, ನೇಮಕ ಪ್ರಕ್ರಿಯೆಗೆ ವೇಗ ನೀಡಲು ತಯಾರಿ ನಡೆಸಲಾಗುತ್ತಿದೆ.

ಈ ಹಿಂದೆ ವಿವರಣಾತ್ಮಕ ಮಾದರಿಯ ಪ್ರಶ್ನೆಗಳಿದ್ದಾಗ ಮೌಲ್ಯಮಾಪನದ ವೇಳೆ ಅಂಕಗಳ ವ್ಯತ್ಯಾಸ ಹಾಗೂ ಗೊಂದಲಗಳಿಂದ ಕೆಲ ಅಭ್ಯರ್ಥಿಗಳು ನ್ಯಾಯಾಲಯದ ಮೊರೆ ಹೋಗುತ್ತಿದ್ದರು. ಜತೆಗೆ, ಮೌಲ್ಯಮಾಪನ ಕಾರ್ಯ ಕೂಡ ವಿಳಂಬವಾಗುತ್ತಿತ್ತು. ಇದರಿಂದ ಫಲಿತಾಂಶ ಪ್ರಕಟ ಹಾಗೂ ಅಂಕಪಟ್ಟಿ ಪರಿಶೀಲನೆಗೆ ಹೆಚ್ಚಿನ ಸಮಯ ಬೇಕಾಗಿತ್ತು. ಈ ಎಲ್ಲಾ ಕಾರಣಗಳಿಂದ ಸುದೀರ್ಘ ಉತ್ತರದ ಬದಲು ಬಹುಆಯ್ಕೆ ಮಾದರಿಯ ಪ್ರಶ್ನೆಗಳಿಗೆ ಆದ್ಯತೆ ನೀಡಲಾಗುತ್ತಿದೆ. ಇದರಿಂದ ನೇಮಕಾತಿ ಪ್ರಕ್ರಿಯೆಯ ವೇಗವೂ ಹೆಚ್ಚಲಿದೆ. ಸದ್ಯ ಸರಕಾರ ಹಾಗೂ ಶಿಕ್ಷಣ ಇಲಾಖೆ ಈ ಬಗ್ಗೆ ಚರ್ಚೆ ನಡೆಸುತ್ತಿದ್ದು, ಶೀಘ್ರದಲ್ಲೇ ಅಧಿಕೃತ ಆದೇಶ ಹೊರಬೀಳುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಈಗಾಗಲೇ ಶಿಕ್ಷಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿದ್ದು, ನೇಮಕಾತಿ ಪರೀಕ್ಷೆಗಳು ಆರಂಭವಾಗುವ ವೇಳೆಗೆ ಹೊಸ ನಿಯಮದ ಮೂಲಕ ಪರೀಕ್ಷೆ ನಡೆಸಲು ಸಿದ್ಧತೆ ನಡೆದಿದೆ. ಸರಕಾರದ ಈ ನೂತನ ಕ್ರಮದಿಂದಾಗಿ ಮುಂಬರುವ ಎಲ್ಲಾ ಮಾದರಿಯ ಶಿಕ್ಷಕರ ನೇಮಕಾತಿ ಪರೀಕ್ಷೆಗಳಲ್ಲಿ ದೀರ್ಘ ಉತ್ತರದ ಪ್ರಶ್ನೆಗಳಿಗೆ ಕಡಿವಾಣ ಬೀಳುವ ಜತೆಗೆ, ಬಹುಆಯ್ಕೆ ಪ್ರಶ್ನೆಗಳ ಮೂಲಕ ಶೀಘ್ರವಾಗಿ ಮೌಲ್ಯಮಾಪನ ನಡೆಸಿ ಫಲಿತಾಂಶ ಪ್ರಕಟಿಸಲು ಸಾಧ್ಯವಾಗಲಿದೆ.

ಬಹುಆಯ್ಕೆ ಪ್ರಶ್ನೆ ಅಳವಡಿಸಲು ಚಿಂತನೆ

ವಿವರಣಾತ್ಮಕ ಪ್ರಶ್ನೆಗಳನ್ನು ಕೈಬಿಡುವ ಬಗ್ಗೆ ಸರಕಾರದ ಹಂತದಲ್ಲಿ ಚರ್ಚೆಗಳು ನಡೆಯುತ್ತಿವೆ. ಸರಕಾರದ ಅಧಿಕೃತ ಸೂಚನೆ ಬಂದರೆ ಅದರಂತೆ ಕ್ರಮ ಕೈಗೊಳ್ಳಲಾಗುವುದು.

-**ಸುರಳ್ಕರ್ ವಿಕಾಸ್ ಕಿಶೋರ್** ಆಯುಕ್ತ, ಶಾಲಾ ಶಿಕ್ಷಣ ಇಲಾಖೆ

ಸರಕಾರದ ಕ್ರಮವನ್ನು ಸ್ವಾಗತಿಸುತ್ತೇವೆ. ಬಹುಆಯ್ಕೆ ಪ್ರಶ್ನೆಗಳು ಇದ್ದರೆ ನೇಮಕಾತಿ ಪ್ರಕ್ರಿಯೆ ವೇಗವಾಗಲಿದೆ. ಸರಕಾರ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಬೇಕಿದೆ.

-**ಚಂದ್ರಶೇಖರ್ ನುಗ್ಗಲಿ** ಅಧ್ಯಕ್ಷ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ

ಯಾವೆಲ್ಲ ನೇಮಕಾತಿಗೆ ಅನ್ವಯ?

- ಜಿಪಿಎಸ್‌ಟಿಆರ್–ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ (6 ರಿಂದ 8ನೇ ತರಗತಿ)
- ಎಚ್‌ಎಸ್‌ಟಿಆರ್–ಪ್ರೌಢಶಾಲಾ ಶಿಕ್ಷಕರ ನೇಮಕಾತಿ (9 ಮತ್ತು 10ನೇ ತರಗತಿ)
- ಪಿಎಸ್‌ಟಿಆರ್–ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ (1 ರಿಂದ 5 ನೇ ತರಗತಿ)

ನೇಮಕಾತಿಗೆ ವೇಗ

ವಿವರಣಾತ್ಮಕ ಪ್ರಶ್ನೆಗಳ ಬದಲು ಬಹುಆಯ್ಕೆ ಮಾದರಿ ಪ್ರಶ್ನೆಗಳಿಂದ ಒಎಂಆರ್ ಶೀಟ್‌ಗಳ ಮೂಲಕ ಕಂಪ್ಯೂಟರ್ ಆಧಾರಿತ ಮೌಲ್ಯಮಾಪನ ಶೀಘ್ರವಾಗಿ ನಡೆಯಲಿದೆ. ಇದರಿಂದ ಆದಷ್ಟು ಬೇಗ ಕೆಲವೇ ತಿಂಗಳುಗಳಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸುವ ನಿರೀಕ್ಷೆಯಿದೆ.

ಎಸ್‌ಐಟಿ ರಚನೆ ಆದೇಶಕ್ಕೆ ತಡೆ

ಆರ್ಟ್ ಆಫ್ ಲಿವಿಂಗ್ ಜಮೀನು ಒತ್ತುವರಿ ಆರೋಪ

ಬೆಂಗಳೂರು: ಆರ್ಟ್ ಆಫ್ ಲಿವಿಂಗ್ ಫೌಂಡೇಷನ್‌ಗೆ ಸೇರಿದ 'ವೇದ ವಿಜ್ಞಾನ ಮಹಾ ವಿದ್ಯಾಪೀಠ ಟ್ರಸ್ಟ್' (ವಿವಿಎಂವಿಪಿಟಿ) ವಿರುದ್ಧದ ಸರಕಾರಿ ಭೂಮಿ ಒತ್ತುವರಿ ಆರೋಪ ಸಂಬಂಧ ತನಿಖೆ ನಡೆಸಲು ಎಸ್‌ಐಟಿ ರಚನೆ ಮಾಡಿ ಸರಕಾರ ಹೊರಡಿಸಿರುವ ಆದೇಶಕ್ಕೆ ಹೈಕೋರ್ಟ್ ಸೋಮವಾರ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಸರಕಾರದ ಆದೇಶ ಪ್ರಶ್ನಿಸಿ ವಿವಿಎಂವಿಪಿಟಿ ಅಧಿಕೃತ ಪ್ರತಿನಿಧಿ ಕೆ.ಪ್ರಸಾದ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.



ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ''ಟ್ರಸ್ಟ್ ಭೂ ಒತ್ತುವರಿ ಮಾಡಿದೆ ಎಂಬ ಆರೋಪ ಸಂಬಂಧ ಸರಕಾರ ಆದೇಶ ಹೊರಡಿಸುವುದಕ್ಕೂ ಮುನ್ನ ಸಕ್ಷಮ ಪ್ರಾಧಿಕಾರದಡಿಯ ಕಡ್ಡಾಯ ನಿಯಮಗಳ ಪ್ರಕಾರ ಜಂಟಿ ಸಮೀಕ್ಷೆ ನಡೆಸಿಲ್ಲ, ಕರ್ನಾಟಕ ಭೂ ಕಂದಾಯ ಕಾಯಿದೆ 1964ರಡಿ ನಿಯಮದಂತೆ ಆದೇಶ ಹೊರಡಿಸಿಲ್ಲ,'' ಎಂದು ಅಭಿಪ್ರಾಯ ವ್ಯಕ್ತಪಡಿಸಿ ಮುಂದಿನ ವಿಚಾರಣೆವರೆಗೆ ಸರಕಾರದ ಆದೇಶಕ್ಕೆ ತಡೆ ನೀಡಿತು.

ಅಲ್ಲದೆ, ರಾಜ್ಯ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ನೋಟಿಸ್ ಹಾಗೂ ಪ್ರಾದೇಶಿಕ ಆಯುಕ್ತ ಸೇರಿ ಒಟ್ಟು 12 ಮಂದಿ ಪ್ರತಿವಾದಿಗಳಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಿತು.

ಅರ್ಜಿದಾರರ ಪರ ವಾದಿಸಿದ ಹಿರಿಯ ವಕೀಲ ಶ್ರೀರಂಗ, ''ಜಮೀನಿಗೆ ಸಂಬಂಧಿಸಿದಂತೆ ಪೋಡಿ ಮತ್ತು ದುರಸ್ತಿ ಕೋರಿ ಅರ್ಜಿ ಸಲ್ಲಿಸಲಾಗಿದೆ. ಅದು ಪ್ರತಿವಾದಿ ಅಧಿಕಾರಿಗಳ ಪರಿಶೀಲನೆಯಲ್ಲಿದೆ. ಅರ್ಜಿದಾರರು ಒತ್ತುವರಿ ಮಾಡಿದ್ದಾರೆಯೇ ಎಂಬುದರ ಕುರಿತು ಪ್ರತಿವಾದಿ-ಸರಕಾರದ ಮುಂದೆ ಯಾವುದೇ ವರದಿ ಇಲ್ಲ, ಅರ್ಜಿದಾರರ ಉಪಸ್ಥಿತಿಯಲ್ಲಿ ಜಂಟಿ ಸಮೀಕ್ಷೆ ನಡೆಸದೆ, ಅಲ್ಲಿ ಒತ್ತುವರಿ ನಡೆದಿದೆ ಎಂಬ ತೀರ್ಮಾನಕ್ಕೆ ಬರಲು ಪ್ರತಿವಾದಿ ಅಧಿಕಾರಿಗಳಿಗೆ ಸಾಧ್ಯವಿಲ್ಲ,'' ಎಂದು ಪ್ರತಿಪಾದಿಸಿದರು. ಅದಕ್ಕೆ ಸರಕಾರಿ ವಕೀಲರು ಎಸ್‌ಐಟಿ ಆದೇಶಕ್ಕೆ ಸಂಬಂಧಿಸಿದ ಕಾರಣಗಳನ್ನು ಉಲ್ಲೇಖಿಸಿ, ''ಒತ್ತುವರಿಗೆ ಸಂಬಂಧಿಸಿದಂತೆ ಅರ್ಜಿದಾರರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ,'' ಎಂದು ತಿಳಿಸಿದರು.

ಕಸಾಪ ಪುನಶ್ಚೇತನಕ್ಕಾಗಿ ಒಗ್ಗಟ್ಟಿನ ಕರೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿಗೆ ಈ ಬಾರಿ ನಿವೃತ್ತ ಅಧಿಕಾರಿಗಳು ಅಥವಾ ಸಾಹಿತ್ಯೇತರರು ರಾಜ್ಯಾಧ್ಯಕ್ಷರಾಗುವುದನ್ನು ತಡೆಯಬೇಕು. ಸಾಹಿತಿಗಳನ್ನೇ ಪರಿಷತ್ತಿನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವ ನಿಟ್ಟಿನಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು ಎಂದು ನಾನಾ ಸಾಹಿತಿಗಳು, ಕಲಾವಿದರು, ಚಿಂತಕರು, ಹೋರಾಟಗಾರರು ನಿರ್ಣಯ ಕೈಗೊಂಡರು.

ಪರಿಷತ್ತಿನ ಮುಂಬರುವ ಚುನಾವಣೆ ಹಿನ್ನೆಲೆ ಹಿರಿಯ ಸಾಹಿತಿ ಜಾಣಗೆರೆ ವೆಂಕಟರಾಮಯ್ಯ ಅವರಿಗೆ ಬೆಂಬಲ ಸೂಚಿಸುವ ಉದ್ದೇಶದಿಂದ ನಗರದ ಗಾಂಧಿ ಭವನದಲ್ಲಿ ಸಮಾಲೋಚನಾ ಸಭೆ ಹಮ್ಮಿಕೊಳ್ಳಲಾಗಿತ್ತು. ಸಾಹಿತ್ಯ, ಶಿಕ್ಷಣ, ಸಿನಿಮಾ, ಪತ್ರಿಕೋದ್ಯಮ ಹಾಗೂ ನಾನಾ ಕನ್ನಡ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿ ಸಾಹಿತ್ಯ ಪರಿಷತ್ತಿನ ಪುನಶ್ಚೇತನದ ಅಗತ್ಯವನ್ನು ಒತ್ತಿ ಹೇಳಿದರು.

ಕಸಾಪ ಇತ್ತೀಚಿನ ವರ್ಷಗಳಲ್ಲಿ ಅಧಃಪತನದತ್ತ ಸಾಗಲು, ಸಾಮಾನ್ಯ ಕನ್ನಡಿಗರಿಂದ ದೂರವಾಗಲು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿ ಬಂದಿದ್ದ ಅಧಿಕಾರಶಾಹಿಗಳೇ ಕಾರಣ. ಪರಿಷತ್ತಿನ ಗೌರವ-ಘನತೆಯನ್ನು ಮರುಸ್ಥಾಪಿಸುವ ಆಶಯದೊಂದಿಗೆ ಕಸಾಪ ರಾಜ್ಯ ಅಧ್ಯಕ್ಷಸ್ಥಾನಕ್ಕೆ ಕನ್ನಡ ಹೋರಾಟಗಾರ, ಹಿರಿಯ ಪತ್ರಕರ್ತ, ಲೇಖಕ ಜಾಣಗೆರೆ ವೆಂಕಟರಾಮಯ್ಯ ಅವರನ್ನು ಆಯ್ಕೆ ಮಾಡಿದ್ದೇವೆ. ಇವರಿಗೆ ನಾವೆಲ್ಲರೂ ಬೆಂಬಲ ನೀಡುವ ಮೂಲಕ ಪರಿಷತ್ತಿನ ಗೌರವ ಕಾಪಾಡಬೇಕು ಎಂದು ಕನ್ನಡ ನಾಡು ನುಡಿ ಜಾಗೃತಿ ಸಮಿತಿ, ಸಮಾನ ಮನಸ್ಕರ ವೇದಿಕೆ, ಜಾಗೃತ-ನಾಗರಿಕರು ಕರ್ನಾಟಕ ಸಂಘಟನೆಗಳು ಒಮ್ಮತದಿಂದ ನಿರ್ಧರಿಸಿದವು.

ಹಿರಿಯ ಸಾಹಿತಿ ಎಚ್.ಸಿ. ಸಿದ್ದರಾಮಯ್ಯ, ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್ ಗೌಡ, ನಿಯೋಜಿತ ಕಸಾಪ ಅಭ್ಯರ್ಥಿ ಜಾಣಗೆರೆ ವೆಂಕಟರಾಮಯ್ಯ ಮಾತನಾಡಿದರು. ಮಾವಳ್ಳಿ ಶಂಕರ್, ಕರ್ನಾಟಕ ಡಾ. ರಾಜ್‌ಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು, ಲೇಖಕ ಡಾ. ಬಂಜಗೆರೆ ಜಯಪ್ರಕಾಶ್, ಪತ್ರಕರ್ತ ಆರ್.ಜಿ.ಹಳ್ಳಿ ನಾಗರಾಜ್, ಲೇಖಕಿ ಡಾ. ಎಚ್.ಎಲ್.ಪುಷ್ಪ ಇದ್ದರು.

ಜಾಣಗೆರೆ ವೆಂಕಟರಾಮಯ್ಯ ಬೆಂಬಲಿಗರ ಸಭೆ

ಮುಂಗಾರು ಬಿತ್ತನೆ ಪ್ರಮಾಣ ಕೊಂಚ ಚೇತರಿಕೆ

ಬೆಂಗಳೂರು: ಮುಂಗಾರು ಬಿತ್ತನೆ ಪ್ರಮಾಣದಲ್ಲಿ ಸ್ವಲ್ಪ ಚೇತರಿಕೆ ಕಂಡಿದೆ. ಜುಲೈ ಮೊದಲ ವಾರದಲ್ಲಿ 36.47 ಲಕ್ಷ ಹೆಕ್ಟೇರ್ (ಶೇ.43) ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿತ್ತು. ಆದರೆ, ಜುಲೈ ಅಂತ್ಯದ ವೇಳೆಗೆ 48.84 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದ್ದು, ಶೇ.58ರಷ್ಟು ಗುರಿ ತಲುಪಲಾಗಿದೆ.

ಕೆಲವು ಜಿಲ್ಲೆಗಳಲ್ಲಿ ಅಬ್ಬರದ ಮಳೆಯಾಗಿದ್ದು, ಅತಿವೃಷ್ಟಿ ಸೃಷ್ಟಿಯಾಗಿದೆ. ಕರಾವಳಿ, ಮಲೆನಾಡು ಭಾಗಗಳಲ್ಲಿ ಮಳೆಯ ಪ್ರಮಾಣ ಹೆಚ್ಚಾಗಿದ್ದು, ಜಲಾಶಯಗಳಲ್ಲಿ ನೀರಿನ ಮಟ್ಟವೂ ಏರಿಕೆಯಾಗಿದೆ. ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಮುಂಗಾರು ಬಿತ್ತನೆ ಗುರಿ ಮೀರಿದ ಸಾಧನೆಯಾಗಿದೆ. ಆದರೆ, ಬೆಂಗಳೂರು ನಗರ, ದಕ್ಷಿಣ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬಯಲುಸೀಮೆಯ ಹಲವು ಭಾಗಗಳಲ್ಲಿ ಮಳೆಯಿಲ್ಲದೆ ಬಿತ್ತನೆ ಚಟುವಟಿಕೆಗಳಿಗೆ ಹಿನ್ನಡೆಯಾಗಿದೆ. ಆಗಸ್ಟ್‌ನಲ್ಲಿ ಮಳೆಯಾಗುವ ಸಾಧ್ಯತೆಯಿದ್ದು, ರೈತರಲ್ಲಿ ಇನ್ನೂ ಆಶಾಭಾವನೆ ಮೂಡಿಸಿದೆ. ಕೃಷಿ ಇಲಾಖೆ ಅಂಕಿ ಸಂಖ್ಯೆಗಳ ಪ್ರಕಾರ, ಈ ಬಾರಿ 84.10 ಲಕ್ಷ ಹೆಕ್ಟೇರ್ ಬಿತ್ತನೆಯ ಗುರಿ ಹೊಂದಲಾಗಿದ್ದು, ಜುಲೈ ಅಂತ್ಯಕ್ಕೆ ಶೇ.58ರಷ್ಟು ತಲುಪಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಕೋಲಾರ, ಬೆಂಗಳೂರು ದಕ್ಷಿಣ, ತುಮಕೂರು, ಮಂಡ್ಯ ಜಿಲ್ಲೆಗಳಲ್ಲಿ ಕೂಡ ಈ ವರ್ಷ ಬಿತ್ತನೆ ಗಣನೀಯವಾಗಿ ಕುಸಿದಿದೆ.

ಕೆಲವು ಜಿಲ್ಲೆಗಳಲ್ಲಿ ಎರಡೆರಡು ಬಾರಿ ಬಿತ್ತನೆ ಮಾಡಿದ್ದಾರೆ. ಮುಂಗಾರು ಆರಂಭದಲ್ಲಿ ಒಮ್ಮೆ ಬಿತ್ತನೆ ಮಾಡಿದ್ದರು. ಆದರೆ ಧಾನ್ಯಗಳು ಮೊಳಕೆಯೊಡೆಯದ ಕಾರಣ ಮತ್ತೊಮ್ಮೆ ಬಿತ್ತನೆ ಮಾಡಿದರು. ಮಳೆಯಿಲ್ಲದೆ ಅದೂ ಕೈಕೊಟ್ಟಿತು. ಆಹಾರ ಧಾನ್ಯಗಳ ಬಿತ್ತನೆ ಕೂಡ ಈ ಬಾರಿ ಅತ್ಯಂತ ಕಡಿಮೆ ಪ್ರಮಾಣದಲ್ಲಾಗಿದೆ. ತೊಗರಿ, ಉದ್ದು, ಹೆಸರು ಮತ್ತಿತರ ಆಹಾರ ಧಾನ್ಯಗಳು 60.45 ಲಕ್ಷ ಹೆಕ್ಟೇರ್ ಬಿತ್ತನೆಯ ಗುರಿಯಲ್ಲಿ ಕೇವಲ 28.37 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. ಇನ್ನು, ರಾಗಿ, ಭತ್ತ, ಜೋಳ ಮತ್ತಿತರ ಏಕದಳ ಧಾನ್ಯಗಳ ಬಿತ್ತನೆ 37.70 ಲಕ್ಷ ಹೆಕ್ಟೇರ್ ಬಿತ್ತನೆ ಪೈಕಿ 14.79 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. ಹೀಗಾಗಿ, ಈ ಬಾರಿ ಎಲ್ಲಾ ಬಗೆಯ ದಿನಸಿ, ಕಾಳುಗಳ ಉತ್ಪಾದನೆ ಕುಂಠಿತಗೊಳ್ಳಲಿದ್ದು, ಮುಂಬರುವ ದಿನಗಳಲ್ಲಿ ದಿನಸಿ ಪದಾರ್ಥಗಳ ದರ ಏರಿಕೆಯಾಗುವ ಸಾಧ್ಯತೆಯಿದೆ.



ಬಿತ್ತನೆ ಗುರಿ ತಲುಪಿದ ಜಿಲ್ಲೆಗಳು (ಲಕ್ಷ ಹೆಕ್ಟೇರ್‌ಗಳಲ್ಲಿ)

ಜಿಲ್ಲೆ	ಬಿತ್ತನೆ ಗುರಿ	ಸಾಧನೆ
ಬೆಳಗಾವಿ	7.52	7.16
ಬೀದರ್	4.12	3.70
ದಕ್ಷಿಣ ಕನ್ನಡ	0.10	0.08
ಧಾರವಾಡ	2.83	2.71
ಗದಗ	3.14	2.80
ಹಾವೇರಿ	3.29	3.11
ಉ. ಕನ್ನಡ	0.66	0.41

ಕಡಿಮೆ ಬಿತ್ತನೆಯಾದ ಜಿಲ್ಲೆಗಳು (ಲಕ್ಷ ಹೆಕ್ಟೇರ್‌ಗಳಲ್ಲಿ)

ಜಿಲ್ಲೆ	ಗುರಿ	ಸಾಧನೆ
ಬೆಂ.ಗ್ರಾಮಾಂತರ	0.74	0.02
ಬೆಂ. ನಗರ	0.21	0.004
ಚಾಮರಾಜನಗರ	0.96	0.31
ಚಿಕ್ಕಬಳ್ಳಾಪುರ	1.27	0.08
ಚಿಕ್ಕಮಗಳೂರು	0.97	0.08
ಬೆಂ.ದಕ್ಷಿಣ	0.86	0.01
ಕೋಲಾರ	0.86	0.04
ಕೊಡಗು	0.19	0.03

ಚಾರ್ಮಾಡಿಯಲ್ಲಿ ಮತ್ತೆ ಸಲಗ ಪ್ರತ್ಯಕ್ಷ

ಬೆಳ್ತಂಗಡಿ (ದ.ಕ.): ಚಾರ್ಮಾಡಿ ಘಾಟಿಯ ಒಂಬತ್ತನೇ ತಿರುವಿನ ಬಳಿ ಒಂಟಿ ಸಲಗವೊಂದು ಭಾನುವಾರ ರಾತ್ರಿ ಮತ್ತು ಸೋಮವಾರ ಬೆಳಗ್ಗೆ ಕಾಣಿಸಿಕೊಂಡು ವಾಹನ ಸವಾರರಲ್ಲಿ ಆತಂಕ ಮೂಡಿಸಿದೆ. ಕಾಡಾನೆ ರಸ್ತೆ ದಾಟಿದ ದೃಶ್ಯವನ್ನು ಪ್ರಯಾಣಿಕರು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದು, ಮಾಹಿತಿ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಆನೆಯನ್ನು ಸುರಕ್ಷಿತವಾಗಿ ಕಾಡಿನೊಳಗೆ ಅಟ್ಟಿದರು.

ಹಾಡಹಗಲೇ ಮನೆಗೆ ನುಗ್ಗಿ ಲೂಟಿ

ಕೊಣಾಜೆ (ದ.ಕ.): ಒಂಟಿ ಮಹಿಳೆ ವಾಸಿಸುತ್ತಿದ್ದ ಮನೆಯೊಂದಕ್ಕೆ ಸೋಮವಾರ ಹಾಡಹಗಲೇ ನುಗ್ಗಿದ ಇಬ್ಬರು ದುಷ್ಕರ್ಮಿಗಳು ಮಹಿಳೆಯನ್ನು ಬೆದರಿಸಿ ಸುಮಾರು ನಾಲ್ಕು ಲಕ್ಷ ರೂ. ಮೌಲ್ಯದ ಚಿನ್ನಾಭರಣ ಲೂಟಿ ಮಾಡಿ ಪರಾರಿಯಾಗಿದ್ದಾರೆ.

Manufacturing PMI slips to near 5-year low in July



Sources: HSBC, S&P Global PMI Data were collected July 8-27, 2026

Our Bureau
New Delhi

The manufacturing sector moderated in July as the Purchasing Manager's Index for the month slipped to a five-year low of 53.5 as against 54.2 in June, S&P Global reported on Monday.

Job creation also weakened in July.

The index is below the long-run series average of 54.2. According to the agency, manufacturers in India continued to benefit from demand resilience, with a sustained rise in new orders underpinning a further expansion in output during July.

WEST ASIA CONFLICT

"However, growth cooled across some metrics, such as total sales, input purchasing and employment," it said.

"The suppliers' delivery times index rose in July, an encouraging sign that supply chain delays are continuing to unwind. However, renewed tensions in West Asia have raised fresh doubts about how durable these improvements will be," Pranjul Bhandari, Chief India Economist at HSBC, said.

Further, manufacturers appear to be rebuilding buffers; inventories of both inputs and finished goods increased alongside a rise in purchasing volumes, suggesting firms are securing supply and limiting exposure to potential disruption.

In terms of operating capacity, the agency noted that only a small proportion of firms indicated greater backlog of work.

The overall rate of accumulation was the strongest in a year, albeit only slight overall.

"Job creation across India's manufacturing industry weakened for the third straight month in July. The rate of increase in employment was the slowest in the current 29-month period of uninterrupted growth," it said, while adding that cost pressures receded to their weakest in five months, though companies continued to report higher prices for transportation, in particular.

Talking about business sentiment, the agency highlighted that it strengthened from June's recent low, with firms signalling a positive outlook for demand, infrastructure projects and new client enquiries.

Bhandari said output and new export orders strengthened, pointing to resilient demand, particularly from overseas markets.

India, Uzbekistan aim to double bilateral trade in 3 years

Our Bureau
New Delhi

India and Uzbekistan have set ambitious targets to sharply expand bilateral trade and investment, with New Delhi proposing to double two-way trade over the next three years, from about $1.3 billion at present, while Tashkent said it hoped to raise the figure to $2 billion by next year.

At a business forum meeting on Monday, the two countries identified mining, pharmaceuticals and healthcare, information technology, food processing and the digital economy as priority sectors for deeper collaboration.

Uzbekistan also pitched opportunities in metallurgy, chemicals, energy, automobiles and digital infrastructure.

Commerce and Industry Minister Piyush Goyal said the recently signed bilateral investment treaty would boost investor confidence. "The recent bilateral investment treaty between India and Uzbekistan generates greater investor confidence. Areas to build strong collaboration between the two countries include mining,

Commerce Minister Piyush Goyal (right) with Uzbekistan Minister Laziz Kudratov PTI

textiles, pharmaceuticals and healthcare, agriculture and food processing along with IT and digital economy," he said.

The event was organised by industry chamber Ficci in partnership with the Ministry of Commerce and Industry and Uzbekistan's Ministry of Investment, Industry and Trade.

Uzbekistan's Minister of Investment, Industry and Trade Laziz Kudratov said bilateral trade had grown by about 30 per cent last year to reach $1.3 billion for the first time.

He expressed hope that it would touch $2 billion next year, before rising to $3-5 billion in the coming years.